ಭಾರತಿ ಮಾನಗೆ, ಹೊನ್ನಾವರ
*ಸದ್ಯ ಭಾರತ ಯಾವುದರಲ್ಲಿ ಮುಂದಿದೆ?*



ಬೊಂಬೆಯಾಟದಲ್ಲಿ ಸೂತ್ರಧಾರಿ ಹೈಕಮಾಂಡ್!

ಜೆ.ಆರ್.ಆದಿನಾರಾಯಣಮುನಿ, ಬೆಂಗಳೂರು
*ಥಟ್ಟಂತ ಹೇಳಿ; ಪುಣ್ಯ ಎಂದರೆ ಏನು?*
ಪುಣ್ಯಕೋಟಿ ಎಂಬ ಹಸುವನ್ನು ಕಾಳಿಂಗನೆಂಬ ಗೊಲ್ಲನು ಪ್ರೀತಿಯಿಂದ ಕರೆಯುತ್ತಿದ್ದ ರೀತಿ!

ಎಚ್. ಆನಂದ್ ಕುಮಾರ್, ಚಿತ್ರದುರ್ಗ
*ಕೇಳುವವರು ನೂರಾರು, ಹೇಳುವವರು ನೀವೊಬ್ಬರೇ. ಎಷ್ಟೊಂದು ದೊಡ್ಡ ತಲೆ ನಿಮ್ಮದು. ಏನಂತೀರಿ?*
ಹಾಗೇನಿಲ್ಲ. ನನ್ನ ಟೋಪಿಗಿಂತಲೂ ನನ್ನ ತಲೆ ಚಿಕ್ಕದೇ!

ಎಸ್. ಶ್ರೀಧರ್, ಬೆಂಗಳೂರು
*ಬೇಸರಕ್ಕೆ ಮದ್ದು ಯಾವುದು?*
ಬೇಕಾಗಿದ್ದೆಲ್ಲಾ ಸರಸರನೆ ಸಿಗುವಂತಾಗುವುದು!

ಬಿ.ಎಂ. ಪರಶಿವಮೂರ್ತಿ, ಬೆಂಗಳೂರು
*ಏನೇನೋ ವ್ಯಾಪಾರ ಮಾಡಿದೆ. ಕೈ ಹತ್ತಲಿಲ್ಲ. ಈಗ ಸೀರೆ, ಬ್ಲೌಸ್ ಪೀಸ್ ವ್ಯಾಪಾರ ಮಾಡೋಣ ಎಂದುಕೊಂಡಿದ್ದೇನೆ. ಮಾಡಲೇ?*




ಬೇಡ. ಒಂದು ಜಾತ್ಯಾಧಾರಿತ ಮಠ ಸ್ಥಾಪಿಸಿಬಿಡಿ. ಕೈಯೂ ಹತ್ತುತ್ತದೆ, ಮೈಯೂ ಹಿಗ್ಗುತ್ತದೆ!

ಬೋ.ಪಾ. ವೆಂಕಟೇಶ್, ಬೋಧನಹೊಸಹಳ್ಳಿ
*ಸಂಸಾರದಲ್ಲಿ ಸರಿಗಮ; ಇದರ ಅರ್ಥವೇನು?*
ಸ ಜ್ಞಾನ; ರಿ ಮಿತ್ರ; ಗ ಅಹಂಕಾರ; ಮ ವರ್ಜ್ಯ; ಎಂದರೆ ಜ್ಞಾನವೇ ಮಿತ್ರ, ಅಹಂಕಾರವೇ ಶತ್ರು!

ಹರಳಹಳ್ಳಿ ಪುಟ್ಟರಾಜು, ಪಾಂಡವಪುರ
*ಹುಡುಗಿಯರು ಗುಣವಂತನಿಗಿಂತ ಹಣವಂತನನ್ನೇ ಏಕೆ ಇಷ್ಟ ಪಡುತ್ತಾರೆ?*
ಅವನದೇ ಹಣ ಖರ್ಚು ಮಾಡಿ ಅವನನ್ನು ತಮಗೆ ಬೇಕಾದ ಹಾಗೆ ರೂಪಿಸಿಕೊಳ್ಳಲು.

ಜಾಕೋಬ್ ಡಿಸೋಜ, ಕುರುವಳ್ಳಿ
*ಕ್ಷಮಿಸಲಾಗದ ತಪ್ಪಿಗೆ ಕ್ಷಮೆ ಇದೆಯೆ?*
ತಪ್ಪು ಚಿಕ್ಕದಾಗಿದ್ದರೆ ಕ್ಷಮೆ ಇಲ್ಲ; ದೊಡ್ಡದಾಗಿದ್ದರೆ ಮಂತ್ರಿಪದವಿಗೇರಿ, ಕಾನೂನು ತಿರುಚಿ, ಕ್ಷಮೆ ಪಡೆದು. ಝುಂಂಂ ಎಂದು ಇರಬಹುದು!

ಪೇಂಟರ್ ಪಾಪು, ಸಂತೇಮರಹಳ್ಳಿ
*ಕೈಯಲ್ಲಿ ಆಗದೇ ಇರುವವರು ಮೈ ಪರಚಿಕೊಳ್ಳುವುದೇಕೆ?*
ಕೆಲಸದ ಬಗ್ಗೆ ಅಲರ್ಜಿ ಉಂಟಾಗಿ ಮೈಮನದಲ್ಲಿ ತೀವ್ರವಾದ ತುರಿಕೆ ಉಂಟಾಗಿರುತ್ತದಲ್ಲ!

ಮಹಾವೀರ ಕಾಸರ, ಚನ್ನಗಿರಿ
*ಜೆಂಟ್ಸ್ ಸ್ಪೆಷಲಿಸ್ಟ್ ಎಂದು ಲೇಡಿ ಟೈಲರ್‌ಗಳು ಏಕೆ ಬೋರ್ಡ್ ಹಾಕಿಕೊಂಡಿರುವುದಿಲ್ಲ?*
ಆ ಟೈಲರ್‌ಗಳು ಚೆನ್ನಾಗಿದ್ದರೆ ಜೆಂಟ್ಸ್‌ಗಳ ಲೇಡೀಸ್ ಜೆಂಟ್ಸನ್ನು ಇಲ್ಲಿಗೆ ಬರಲು ಬಿಡುವುದಿಲ್ಲ, ಚೆನ್ನಾಗಿಲ್ಲದಿದ್ದರೆ ಜೆಂಟ್ಸೇ ಬರುವುದಿಲ್ಲ.

ಎಚ್.ಆರ್. ದೇಸಾಯಿ, ರಾಯಚೂರು
*ಹಿಟ್ಲರ್, ಸದ್ದಾಂ ಹುಸೇನ್, ವೀರಪ್ಪನ್, ಬಿನ್ ಲಾಡನ್ ಇವರೆಲ್ಲರೂ ನಮ್ಮಂತೆ ದೇವರ ಮಕ್ಕಳೇನಾ?*
ಸಂದೇಹವೇನದರೊಳ್? ದೇವನೆಂಬ ಕಂಪ್ಯೂಟರ್‌ಗೆ ವಿಧಿಯೆಂಬ ವೈರಸ್ ತಗುಲಿದಾಗ ಕರಪ್ಟ್ ಆದ ಫೈಲ್‌ಗಳು ಇವು.

ವಿಶ್ವನಾಥ ಪತಂಗೆ, ಗುಲಬರ್ಗಾ
*ಪಾದಯಾತ್ರೆ ಮಾಡುವವರನ್ನೆಲ್ಲಾ ಉತ್ತಮ ಜನಪ್ರತಿನಿಧಿಗಳೆಂದು ಪರಿಗಣಿಸಬೇಕೆ?*
ಜನರ ಪ್ರತಿ ನಿಧಿಯನ್ನೂ ಪಡೆದು, ಕಾರ್ ಇದ್ದವರನ್ನೂ ಪಾದಚಾರಿಗಳನ್ನಾಗಿ ಮಾಡುವವರೆಂದು ಪರಿಗಣಿಸಬಹುದಷ್ಟೆ!

ಸೃಜನ ಜೈನ್, ಹೂವಿನಹಡಗಲಿ
*ಉತ್ತರ ನೀಡುವಾತ ಹಿಮಾಲಯ ಪರ್ವತ ಆದರೆ ಪ್ರಶ್ನೆ ಕೇಳುವಾತ ಗಿಡ್ಡ ಪಿಗ್ಮಿ. ಏನಂತೀರಿ?*
ಪಿಗ್ಮಿ ಅಲ್ಲ, ಪಿಗ್ಮಿ ಏಜೆಂಟ್; ದಿನಕ್ಕೊಂದು ವಿಷಯದ ಮೇಲಿನ ಪ್ರಶ್ನೆ ಸಂಗ್ರಹಿಸಿ ಸಂಗ್ರಹಿಸಿ ಉತ್ತರಿಸುವಾತನ ಅಂಚೆ ಖಾತೆಯಲ್ಲಿ ಡಿಪಾಸಿಟ್ ಮಾಡಿಬಿಡುತ್ತಾನೆ!

## ಬಹುಮಾನಿತ ಪ್ರಶ್ನೆ

ಬಿ. ಚಂದ್ರೇಗೌಡ, ಬೆಂಗಳೂರು
*ಅವಿವಾಹಿತರೆಲ್ಲರೂ ಬ್ರಹ್ಮಚಾರಿಗಳಾಗಿರಬೇಕು ಎಂಬುದನ್ನು ಕಡ್ಡಾಯಗೊಳಿಸಿದರೆ ಹೇಗಿರುತ್ತದೆ?*
ನಕಲಿ ಮ್ಯಾರೇಜ್ ಸರ್ಟಿಫಿಕೇಟ್‌ಗಳ ದಂಧೆ ಬೆಳೆಯುತ್ತದೆ!

ಎಂ.ಬಿ. ಕೃಷ್ಣಮೂರ್ತಿ, ಚಾಮರಾಜನಗರ
*ಶ್ರೀಕೃಷ್ಣನು ಪ್ರೀತಿಸುತ್ತಿದ್ದ ಹದಿನಾರು ಸಾವಿರ ನಾರಿಯರಿಂದ ಎಷ್ಟು ಮಕ್ಕಳು ಜನಿಸಿದ್ದವು ಎಂದು ನಿಮಗೇನಾದರೂ ಗೊತ್ತಾ?*
ಆರ್‌ಟಿಐಗೆ ಅಪ್ಲೈ ಮಾಡಿದ್ದೇನೆ. ಲಿಸ್ಟ್ ಬಂದ ತಕ್ಷಣ ತಿಳಿಸುತ್ತೇನೆ.

ಹೆಚ್.ಆರ್. ಕಡಿವಾಲ, ಬದಾಮಿ
*ಇಂದಿನ ವೈಜ್ಞಾನಿಕ ಯುಗದಲ್ಲೂ ವೈದ್ಯರು ದೇವರ ದಯೆ ಅಂತಾರಲ್ಲಾ...?*
ನಾವು ರೋಗಿಯ ಭಾರಾನ ವೈದ್ಯರ ಮೇಲೆ ಹಾಕ್ತೀವಿ, ಅವರು ದೇವರ ಮೇಲೆ ಹಾಕ್ತಾರೆ, ದೇವರು ನಾಲ್ವರ ಭುಜದ ಮೇಲೆ ಹಾಕ್ತಾನೆ! ಇದೇ ಚಿರಂತನ ಸತ್ಯ!

ಬಸವನಗೌಡ ಹೆಬ್ಬಳಗೆರೆ, ಚನ್ನಗಿರಿ
*ಹುಡುಗಿಯರು ಪಂಚೇಂದ್ರಿಯಗಳಲ್ಲಿ ಕಣ್ಣಿಗೆ ಕಾಡಿಗೆ, ಕಿವಿಗೆ ಓಲೆ, ಮೂಗಿಗೆ ಮೂಗುತಿ, ಚರ್ಮಕ್ಕೆ ಪೌಡರ್ ಹಾಕುತ್ತಾರೆ. ನಾಲಗೆಗೆ ಏನೂ ಹಾಕುವುದಿಲ್ಲವಲ್ಲ?*



ಹಾಕುತ್ತಾರಲ್ಲಾ ಗಾಳಿಸುದ್ದಿ!

ಆರ್. ಮಧುಸೂದನ್, ಹಾಸನ
*ಕೂಸು ಬಡವಾಗದಂತೆ ಗಂಡ ಹೆಂಡತಿ ಜಗಳವಾಡುವುದು ಹೇಗೆ?*
ಒಂದು ಟೈಂ ಟೇಬಲ್ ಹಾಕಿಕೊಂಡು, ಕೂಸು ಬೇಬಿ ಸಿಟ್ಟಿಂಗ್‌ನಲ್ಲಿ ಇರುವ ವೇಳೆಯಲ್ಲೇ ಜಗಳ ಆಡಿ ಮುಗಿಸಿಬಿಡಿ ಅಷ್ಟೆ!

ಅಮರಯ್ಯ ಪತ್ರಿಮಠ, ಶೋರಾಪೂರ
*ನಮಗೆ ಮಧ್ಯರಾತ್ರಿಯಲ್ಲಿ ಸ್ವಾತಂತ್ರ್ಯ ಸಿಕ್ಕಿದ್ದೇಕೆ?*
ಬ್ರಿಟಿಷರಿಗೂ ಗೊತ್ತಿಲ್ಲವಂತೆ, ಗುಂಡು ಹಾಕಿ ಫುಲ್ ಟೈಟ್ ಆಗಿದ್ದರು. ಇವರೇನೋ ಕೇಳಿದರಂತೆ, ಅವರೇನೋ ಕೊಟ್ಟರಂತೆ!

■ ರಾಮ್